ಬೆಂಗಳೂರಿಗೆ ಹೋಗುವ
ಐಷಾರಾಮಿ ಬಸ್ಸಿನಲಿ ಇವರ ಐ ಫೋನ್ ದೊರಕಿದ್ದು
ತನಿಖೆ ಚುರುಕುಗೊಳಿಸಲಾಗಿದೆ

ಸುಳಿವು ಸಿಕ್ಕಲ್ಲಿ ಪೊಲೀಸ್ ಠಾಣೆಗೇ
ನೇರವಾಗಿ ಕಾಲ್ ಮಾಡಬಹುದು
ಮೊದಲು ಮಾಹಿತಿ ಕೊಟ್ಟವರಿಗೆ
ಐದು ಲಕ್ಷ ಇನಾಮು

**(ಹೋಟೆಲ್ ಹಂಪಿ ಇಂಟರ್ ನ್ಯಾಶನಲ್ ಮುಂದೆ ರೈಲು ನಿಲ್ದಾಣದ ಪಕ್ಕ, ಹೊಸಪೇಟೆ)**


'ಕಾಣೆಯಾಗಿದ್ದಾರೆ'

ಹೆಸರು: ಕಿಶನ್ ರಾವ್
ವಯಸ್ಸು: 65
ಕಲರ್: ಎಣ್ಣೆ ಗೆಂಪು, ಕೃಶಕಾಯ
ವಿಳಾಸ: ದೇವರು ಕಾಲೋನಿ, ರಾಯಚೂರು
ಮೊಬೈಲ್: 9449483917

ಕೊನೆಯ ಸಲ ಕಂಡವರು:
ಯಾರೂ ಇಲ್ಲ
ಮೊಬೈಲ್ ಸ್ವಿಚ್ಡ್ ಆಫ್ ಆಗಿದೆ
ಸದ್ಯ ಸಂಪರ್ಕಕ್ಕೆ ಸಿಗುತ್ತಿಲ್ಲ

ಮೂರು ತಿಂಗಳ ಹಿಂದೆ
ಹೆಂಡತಿಯನು ಕಳೆದುಕೊಂಡಿದ್ದ ಶ್ರೀಯುತರು
ರಾಜ್ಯ ಸರ್ಕಾರಿ ನಿವೃತ್ತ ನೌಕರರು

ಅಮೆರಿಕಾದಲಿರುವ ಏಕೈಕ ಮಗನಿಗೆ
ಈಗಾಗಲೇ ಸುದ್ದಿ ಮುಟ್ಟಿಸಲಾಗಿದೆ



**ನೋಟ** 7

ತೀನ್ ಕಂದೀಲ್ ಎದರು ಕಲ್ಲಾನೆ ಮುಂದೆ, ರೈಚೂರು

'ಕಾಣೆಯಾಗಿದ್ದಾರೆ'

ಹೆಸರು: ಅಮೀನಾ
ವೃತ್ತಿ: ಗೃಹಿಣಿ
ವಯಸ್ಸು: 35
ಕಲರ್: ನಿಂಬೆ ಬಣ್ಣ, ಒಳ್ಳೆ ಮೈಕಟ್ಟು
ವಿಳಾಸ: ಅರಬ್ ಮೊಹಲ್ಲಾ, ರಾಯಚೂರು

ರೇಷನ್ ಅಂಗಡಿ ಮುಂದೆ
ಬುರ್ಖಾ ಹಾಕಿಕೊಂಡು
ಸುಡು ಬಿಸಿಲನಲೇ ಕ್ಯೂ ನಿಲ್ಲುತ್ತಿದ್ದ ಹೆಂಗಸು
ತನ್ನ ಮೂರು ಜನ ಹೆಣ್ಣುಮಕ್ಕಳೊಂದಿಗೆ
ಇದ್ದಕ್ಕಿದ್ದಂತೆ ಕಾಣೆಯಾಗಿದ್ದಾಳೆ

ದುಬೈಗೆ ದುಡಿಯಲು ಹೋಗಿದ್ದ
ಈಕೆಯ ಗಂಡ
ವರ್ಷ ಮೂರಾದರೂ
ಮರಳಿ ಬಂದಿಲ್ಲ ಅನ್ನುತ್ತಾರೆ
ಓಣಿಯ ಜನ

ಮೊಬೈಲ್ ಬಳಸುತ್ತಿದ್ದರೊ ಇಲ್ಲವೊ
ಇನ್ನೂ ತಿಳಿದು ಬಂದಿಲ್ಲ